ಅನಾರ್ಕೋಳ ಕಳ್ಳ ಅಂಕಲ್

ಲೇಃ ಸತ್ಯು

ಕನ್ನಡಕ್ಕೆಃ ಪ್ರಭಾಕರ ನಾನಾವಟಿ

ಅನಾರ್ಕೋನ ಕಿರುಪರಿಚಯ....

ಅನಾರ್ಕೋ ಚಿಕ್ಕ ಹುಡುಗಿ. ಇದನ್ನು ಮಾತ್ರ ಅವಳು ಉಟ್ಟ ಬಟ್ಟೆಗಳ ಮೇಲಿಂದ ಹೇಳಬಹುದು. ಅವಳು ಯಾವದೇ ಬಟ್ಟೆಗಳನ್ನು ಧರಿಸಿದರೂ ಕೂಡ ಇದನ್ನು ಊಹಿಸಬಹುದು. ಅವಳನ್ನು ನಿನ್ನ ವಯಸ್ಸೆಷ್ಟು? ಎಂದು ಕೇಳಿದರೆ ಅವಳು ''ಹತ್ತೋ, ಇಪ್ಪತ್ತೋ, ಮೂವತ್ತೋ, ಇಲ್ಲವೋ ಐವತ್ತೋ ... ಆದರೆ ನಿಜ ವಯಸ್ಸು ಹತ್ತು!'' ಎಂದು ಉತ್ತರಿಸಬಹುದು. ಅವಳು ಒಳ್ಳೆಯ ಮೂಡಿನಲ್ಲಿದ್ದರೆ ''ನೀವು ಇಷ್ಟೊಂದು ಚೆನ್ನಾಗಿ ಕೂದಲುಗಳನ್ನು ಹೇಗೆ ಸರಿಪಡಿಸಿಕೊಳ್ಳುವಿರಿ? ಇಲ್ಲವೆ ''ದಿನಾಲು ನೀವು ತಾಯಿಯ ಮಗ್ಗಲಲ್ಲಿಯೇ ಮಲಗುವಿರಾ?'' ಎಂದು ಕೇಳಬಹುದು. ಇಲ್ಲವೆ ''ಗ್ಲ್ಯೂ ಇಷ್ಟೇಕೆ ಬೆರಳಿಗೆ ಅಂಟುತ್ತದೆ?'' ಇಲ್ಲವೆ ''ದಿನಾಲು ನೀವು ಚಾಕಲೇಟ್ ಏಕೆ ತರುವದಿಲ್ಲ?'' ಎಂದು ಪ್ರಶ್ನೆಗಳ ಸುರಿಮಳೆ ಸುರಿಸುವಳು. ಮೂಡ್ ಚೆನ್ನಾಗಿರದಿದ್ದರೆ... ಹೋಗಲಿ ಬಿಡಿ... ನಿಮ್ಮ ಜತೆ ಮಾತೇ ಇಲ್ಲ. ಹೀಗಿದ್ದಾಳೆ ಅನಾರ್ಕೋ.

ಅವಳನ್ನು ಮನೆಯಲ್ಲಿ ಎಲ್ಲರು 'ಅನ್ನೋ' ಎಂದೇ ಪ್ರೀತಿಯಿಂದ ಕರೆಯುವರು. ಏನಾದರೂ ಅಪ್ಪಣೆ ಕೊಡಬೇಕಿದ್ದರೆ ಕರೆಯಲಿಕ್ಕೆ ಬಹು ಸುಲಭ.

"ಅನ್ನೋ, ಹೋಗು, ನೀರು ತಗೊಂಡು ಬಾ",

"ಅನ್ನೋ, ಬಿಸಿಲಲ್ಲಿ ಹೋಗಬೇಡ",

"ಅನ್ನೋ, ಹೊರಗೆ ಕತ್ತಲು - ಎಲ್ಲಿಗೂ ಹೋಗಕೂಡದು",

"ಮಳೆಯಲ್ಲಿ ತೊಯಿಸಿಕೊಳ್ಳಬೇಡ, ಅನ್ನೋऽऽ"

ಮನೆಗೆ ಯಾರಾದರೂ ಅತಿಥಿಗಳು ಬಂದಾಗ ಮಾತ್ರ ಮನೆಯಲ್ಲಿದ್ದವರು ಎಲ್ಲರೆದುರು "ನಾವು ಇವಳನ್ನು ಪ್ರೀತಿಯಿಂದ 'ಅನ್ನೋ' ಹೆಸರಿನಿಂದ ಕರೆಯುತ್ತೇವೆ. ಹಾ! ಹಾ!!" ಎಂದು ಜಂಬ ಕೊಚ್ಚುತ್ತಿದ್ದರು. ಪ್ರೀತಿಯಂತೆ....

ಅನಾರ್ಕೋ ಮತ್ತು ಕಳ್ಳ ಅಂಕಲ್

ಅನಾರ್ಕೋನ ಇಲ್ಲಿಯ ವರೆಗಿನ ಅನುಭವದ ಮೇರೆಗೆ ಆಯುಷ್ಯದಲ್ಲಿ ಏನಾಗಬೇಕೋ ಅದೆಲ್ಲ ಆಗಿಯೇ ಬಿಡುವದು. ಉದಾಹರಣೆಗೆ, ಅನಾರ್ಕೋಳ ಹುಣಿಸೆ ಉಪ್ಪಿನಕಾಯಿ ತಿನ್ನುವದು, ಅದು ಕೂಡ ಮಧ್ಯಾಹ್ನದಲ್ಲಿ ಅಮ್ಮ ಮಲಗಿಕೊಂಡು ಗೊರಕೆ ಹೊಡೆಯುವಾಗ. ಅನಾರ್ಕೋ ದಿನಾಲು ತಪ್ಪದೆ ಮಾಡುವ ಉದ್ಯೋಗ. ತಾಯಿಗೆ ಅದು ತಿಳಿಯುತ್ತಿರಲಿಲ್ಲ. ತಾಯಿ ಎರಡು ಗಂಟೆ ಗೊರಕೆ ಹೊಡೆಯುತ್ತ ಗಡದ್ದಾಗಿ ಮಲಗಿದಾಗ ಅನಾರ್ಕೋ ಅಡಿಗೆ ಮನೆಯಲ್ಲಿ ಉಪ್ಪಿನಕಾಯಿಯಲ್ಲಿ ಎದ್ದಿದ ಬೆರಳುಗಳನ್ನು ನೆಕ್ಕುತ್ತಿದ್ದಳು. ಕೆಲ ಸಲ ಉಪ್ಪಿನಕಾಯಿಗಳನ್ನು ಕಿಂಕುನ ಜೊತೆ ಪಾಲು ಕೂಡ ಮಾಡಿದ್ದಳು. ಆದರೆ ಇಂದು ಮಾತ್ರ ಅವಳು ಸಿಕ್ಕಿಬಿದ್ದಳು. ಇದು ಆಗಲೇಬೇಕಿತ್ತು...

ಆ ದಿನ ಹೀಗೆ ಆಯಿತು; ಮುಂಜಾನೆ ಬರಬೇಕಿದ್ದ ಕಾಯಿ-ಪಲ್ಲೆ ಮಾರುವ ಬಸಮ್ಮ ಆ ದಿನ ಮಧ್ಯಾಹ್ನ ಬಂದಳು.

ಮುಂಬಾಗಿಲಿಗೆ ಬರುವವಳು ಹಿತ್ತಿಲ ಬಾಗಿಲಿಗೆ ಬಂದು ಕದ ಬಾರಿಸಿದಳು. ಇಷ್ಟಾದರೂ ಅಮ್ಮನಿಗೆ ಎಚ್ಚರವಾಗಲಿಲ್ಲ. ಆದರೆ ದೇವರ ಮುಂದೆ ಇಟ್ಟಿದ್ದ ಹಾಲಿನ ಬಟ್ಟಲನ್ನು ನೆಕ್ಕುತ್ತಿದ್ದ ಗೂಡ್ಲಿ ಬೆಕ್ಕು ಮಾತ್ರ ಗಾಬರಿಯಾಯಿತು. ಗೂಡ್ಲಿ ಇದು ಬಡಾವಣೆಯಲ್ಲಿಯ ಎಲ್ಲ ಮಕ್ಕಳ ಆಸ್ತಿ. ಅದು ಯಾರಿಗೂ ಅಳುಕದೆ ಮನೆಯಿಂದ ಮನೆಗೆ, ಎಲ್ಲಿ ಬೇಕೋ ಅಲ್ಲಿ, ಹೋಗಬಹುದು ಮತ್ತು ಯಾರಿಗೂ ತಿಳಿಯುವ ಮೊದಲೇ ಹಾಲು, ಮೀನು, ತಿಂಡಿಗಳನ್ನು ಮುಗಿಸಿಬಿಡುವದು. ಮಕ್ಕಳನ್ನು ಬಿಟ್ಟರೆ ಉಳಿದವರೆಲ್ಲರೂ ಅದಕ್ಕೆ ಬೈದು ಹೊರಗೆ ತಳ್ಳುತ್ತಿದ್ದರು. ಬಸಮ್ಮ ಕದವನ್ನು ಜೋರಾಗಿ ಬಾರಿಸಿದಾಗ ಗೂಡ್ಲಿ ಅಂಜಿ ಅಡಿಗೆ ಮನೆ ಕಿಂಡಿಯಿಂದ ಹೊರಗೆ ಜಿಗಿಯಿತು. ಕಿಂಡಿಯ ಆ ಬದಿಗೆ ಆ ದಿನ ಡಾರ್ಕಿ ಮಲಗಿತ್ತು. ನಿಜವಾಗಿ ನೋಡಿದರೆ ದಿನಾಲು ಮಧ್ಯಾಹ್ನ ಎಲೆಯಂಗಡಿಯ ಹಿಂದೆ ತೂಕಡಿಸುವದು ಈ ಬೀದಿ ನಾಯಿಯ ಚಟ. ಇಂದು ಮಾತ್ರ ಅದು ಕಿಂಡಿಯ ಕೆಳಗೆ ಕಣ್ತೆರೆದು ತೂಕಡಿಸುತ್ತಿತ್ತು. ಡಾರ್ಕಿ ಮತ್ತು ಗೂಡ್ಲಿ ಕೆಲವೊಮ್ಮೆ ಮಿತ್ರರು ಆದರೆ ಉಳಿದೆಲ್ಲ ವೇಳೆ ಆಜನ್ಮ ವೈರಿಗಳು. ಇಂದು ಅವು ವೈರಿಗಳು. ಗೂಡ್ಲಿ ಕಿಂಡಿಯಿಂದ ಹೊರಬಿದ್ದ ಕೂಡಲೆ ಡಾರ್ಕಿ ಜೋರುಜೋರಾಗಿ ಬೊಗಳತೊಡಗಿತು. ಇದು ಕೂಡ ಅಮ್ಮನನ್ನು ಎಚ್ಚರಿಸಲಿಲ್ಲ.

ಈ ಎಲ್ಲ ರಗಳೆಗಳು ನಡೆಯುವಾಗ ಅನಾರ್ಕೊ ಅಡಿಗೆ ಮನೆಯಲ್ಲಿ ಉಪ್ಪಿನಕಾಯಿ ಬಾಟಲಿಯಲ್ಲಿ ಕೈ ಹಾಕುವವಳಿದ್ದಳು.ಎರಡೇ ದಿನಗಳ ಹಿಂದೆ ತಾಯಿಯು ಬಾಟಲಿಯ ಜಾಗ ಬದಲಾಯಿಸಿ ಶೆಲ್ಫಿನ ಮೇಲ್ಭಾಗದಲ್ಲಿ ಇಟ್ಟಿದ್ದಳು. ತಾಯಿಗೆ ಸಂಶಯ ಬಂದಿರಬಹುದು. ಅನಾರ್ಕೊ ಒಂದು ಕಾಲನ್ನು ವಾಶ್ ಬೇಸಿನ್ ಮೇಲೆ ಮತ್ತು ಇನ್ನೊಂದನ್ನು ಶೆಲ್ಫಿನ ಮೇಲಿಟ್ಟು ಎಚ್ಚರದಿಂದ ಸಮತೋಲನೆ ಕಾಯ್ದುಕೊಳ್ಳುತ್ತ   ಬಾಟಲಿಯನ್ನು ಕೈಯಲ್ಲಿ ಹಿಡಿಯುವಷ್ಟರಲ್ಲಿ ಒಂದಾದ ಮೇಲೆ ಒಂದರಂತೆ ಎಲ್ಲ ಘಟನೆಗಳು ನಡೆದವು. ಡಾರ್ಕಿಯ ಬೊಗಳುವಿಕೆ ಅಮ್ಮನನ್ನು ಎಚ್ಚರಿಸದಿದ್ದರೂ ಯಾರದೋ ಮನೆಯಲ್ಲಿಯ ಎಲುಬಿನ ತುಂಡನ್ನು ಬಾಯಿಯಲ್ಲಿ ಹಿಡಿದು ಕಾಗೆ ಹಾರಾಡುತ್ತಿತ್ತು. ಆದರೆ ಆ ತುಂಡು ಹೊರಗೆ ಬೆಂಚಿನ ಮೇಲೆ ಇಟ್ಟಿದ್ದ ಮುಸುರೆ ಪಾತ್ರೆ ಬುಟ್ಟಿಯೊಳಗಿದ್ದ ಗಾಜಿನ ಗ್ಲಾಸುಗಳ ಮೇಲೆ ಬಿತ್ತು. ಗ್ಲಾಸುಗಳು ಒಡೆದು ತುಂಡಾಗಿ ಅಲ್ಲಿಯೇ ಇದ್ದ ಸವುಟುಗಳ ಮೇಲೆ ಬಿದ್ದಾಗ ಬೆಂಚಿನಿಂದ ಸಾಕಷ್ಟು ಸಪ್ಪಳ ಮಾಡುತ್ತ ಒಳಗಿದ್ದ ಪಾತ್ರೆಗಳನ್ನು ಚೆಲ್ಲಾಪಿಲ್ಲಿ ಮಾಡುತ್ತ ಬುಟ್ಟಿಯೇ ಕೆಳಗೆ ಬಿದ್ದು ಬಿಟ್ಟಿತು. ಆ ಸಪ್ಪಳವೇ ಅಮ್ಮನನ್ನು ಎಚ್ಚರಿಸಿತು.

ಅನಾರ್ಕೊ ಅಡಿಗೆ ಮನೆಯಿಂದ ಹೊರಬೀಳುವದರಲ್ಲಿ ಅಮ್ಮನ ಕೈಯಲ್ಲಿ ಸಿಕ್ಕುಬಿದ್ದಳು. ಅಮ್ಮ ಬೈಗಳ ಸುರಿಮಳೆಯನ್ನು ಸುರಿದಳು. ಅನಾರ್ಕೊ ಸುಮ್ಮನಿದ್ದು ಬೈಗಳನ್ನು ಕೇಳುತ್ತ ನಿಂತಳು. ಅವಳನ್ನು ‘ಕಳ್ಳಿ’ ಎಂದು ಬಹಳ ಸಲ ಕರೆದದ್ದಕ್ಕೆ ಅವಳಿಗೆ ಎಲ್ಲಕ್ಕಿಂತ ಹೆಚ್ಚು ಸಿಟ್ಟು ಬಂದಿತು. ಅಮ್ಮನಿಗೆ ನಿದ್ದೆಯಿಂದ ಎಬ್ಬಿಸಿದರ ಸಿಟ್ಟು ಬಂದಿದ್ದರಿಂದ ಅವಳನ್ನು ತೆಗಳುತ್ತಿದ್ದಳು. “ನಾನು ನಿನ್ನನ್ನು ಉಪ್ಪಿನಕಾಯಿ ಎಲ್ಲಿ ಮಾಯವಾದವು? ಎಂದು ಎಷ್ಟು ಸಲ ಕೇಳಿದ್ದೆ. ಅರ್ಧಕ್ಕರ್ಧ ಬಾಟಲಿಯೇ ಮುಗಿದು ಹೋಗಿದೆ. ನೀನೇ ಅದನ್ನೆಲ್ಲ ಕಳುವು ಮಾಡಿ ತಿಂದಿರುವೆ.” ಅನಾರ್ಕೊ ತುಟಿ ಪಿಟ್ಟೆನ್ನಲಿಲ್ಲ. ಅಮ್ಮ ಬೈಯುತ್ತಲೇ ತನ್ನ ಕೋಣೆಯಲ್ಲಿ ಹೋಗಿ ಕುಳಿತಳು. ಅನಾರ್ಕೊ ತನ್ನ ಕೋಣೆಗೆ.

ಅನಾರ್ಕೊ ಬಹು ನೊಂದುಕೊಂಡಿದ್ದಳು. ಮೂಲೆಯಲ್ಲಿರುವ ಕನ್ನಡಿಯ ಮುಂದೆ ನಿಂತಳು. ಮನ ನೊಂದಾಗ ಕನ್ನಡಿಯ ಎದುರು ಬಂದು ಕೂಡುವ ಅಭ್ಯಾಸ. ಆದರೆ ಅಂದು ಅಲ್ಲಿ ಕನ್ನಡಿ ಇರಲಿಲ್ಲ. ಏನೋ ದುರಸ್ತಿ ಕೆಲಸದಿಂದಾಗಿ ಕನ್ನಡಿಯ

ಹಿಂದಿರುವ ಗೋಡೆಯಲ್ಲಿನ ಇಟ್ಟಿಗೆಗಳನ್ನು ಹೊರತೆಗೆದಿಡಲಾಗಿತ್ತು. ಅಲ್ಲಿ ಈಗ ಒಂದು ಮುಖ ಕಾಣುವಷ್ಟು ದೊಡ್ಡ ರಂಧ್ರವಿತ್ತು. ಇಂದು ಅವಳು ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಹೋದಾಗ ಅಲ್ಲಿ ಬೇರೆ ಯಾವದೋ ಮಿನುಗುತ್ತಿರುವ ಮುಖ ಕಂಡಿತು. ತಲೆ ಮೇಲೆ ಸಣ್ಣ ಕ್ರಾಪು, ಮುಖದ ಮೇಲೆ ಚೂಪಾದ ಮೂಗು ಮತ್ತು ಜಾಣ ಕಣ್ಣುಗಳು. ಗಡ್ಡ-ಮೀಸೆಗಳಿರಲಿಲ್ಲ, ನುಣುಪಾದ ಕಪ್ಪುಮುಖ. ಮುಖ ಕೇಳಿತು, "ಇಷ್ಟೇಕೆ ಮುಖ ಸಪ್ಪಗೆ?"
"ಸರಿ, ನಾನು ಹೇಳುತ್ತೇನೆ. ಆದರೆ ನೀನು ಯಾರು?" ಅನಾರ್ಕೊ ಮಾರುತ್ತರ. "ನಾನೊಬ್ಬ ಕಳ್ಳ."
ಇದನ್ನು ಕೇಳಿ ಅನಾರ್ಕೊನ ನೋವು ಮಾಯವಾಯಿತು. ಅವಳು ಹೇಳಿದಳು, "ನಾನು ಕೂಡ ಒಬ್ಬ ಕಳ್ಳಿ."
"ಕೇಳಿ ಖುಷಿಯಾಯಿತು." ಚಪ್ಪಾಳೆಗಾಗಿ ಆತ ತನ್ನ ಕಪ್ಪಗಿನ, ಉದ್ದವಾದ ತೆಳುವಾದ ಕೈ ಮುಂದೆ ಚಾಚಿದ. ಅನಾರ್ಕೊಗೆ ಉಗ್ರವಾದ ವಾಸನೆ ಬಂದಿತು. "ನಿನ್ನ ಕೈಗೆ ಸಾಸಿವೆ ಎಣ್ಣೆಯ ವಾಸನೆ ." ಅನಾರ್ಕೊನ ಸವಾಲು. ಕಳ್ಳ ಸ್ವಲ್ಪ ಹಿಂದೆ ಸರಿದು," ಕೈಗಷ್ಟೇ ಅಲ್ಲ, ಇಡೀ ಮೈಗೆ ಈ ವಾಸನೆ." ಅನಾರ್ಕೊ ಅವನ ಪೂರ್ಣ ದೇಹವನ್ನು ಆ ರಂಧ್ರದಿಂದ ನೋಡಿದಳು, ಬರಿ ಮೈ, ಬೊಜ್ಜಿಲ್ಲದ ಹೊಟ್ಟೆ, ಕೆಳಗೆ ಅರ್ಧ ಚಡ್ಡಿ, ಅದರಿಂದ ಹೊರಬಂದ ತೆಳ್ಳಗಿನ ಎರಡು ಕಾಲುಗಳು. ಎಣ್ಣೆ ಹಚ್ಚಿಕೊಂಡಿದ್ದರಿಂದ ಮಿಂಚುತ್ತಲಿವೆ. "ಜನ ನನ್ನನ್ನು ಹಿಡಿಯಲು ಬಂದರೆ ಈ ಎಣ್ಣೆಯಿಂದಾಗಿ ನಾನು ಅವರ ಕೈಯಿಂದ ಜಾರಿಕೊಂಡು ಹೋಗುವದು ಸುಲಭ." ಅನಾರ್ಕೊಗೆ ಈ ಕಲ್ಪನೆ ಬಹಳ ಹಿಡಿಸಿತು. ಆದರೆ ಅವಳ ತಾಯಿ ಅವಳಿಗೆ ಅರ್ಧ ಚಡ್ಡಿ ಹಾಕಿಕೊಳ್ಳಲು ಅನುಮತಿ ಕೊಡಲಾರಳು.

ಅವಳು ಕಳ್ಳನಿಗೆ ಹೇಳತೊಡಗಿದಳು, "ನಾನು ಒಂದಿಷ್ಟು ಅಡಿಗೆ ಮನೆಯಲ್ಲಿಯ ಉಪ್ಪಿನಕಾಯಿ ತಗೊಳ್ಳುತ್ತಿದ್ದದ್ದನ್ನು ನನ್ನ ತಾಯಿ ನೋಡಿದಳು. ನನಗೆ ಬೈದು 'ಕಳ್ಳಿ' ಎಂದು ಹೇಳಿದಳು." ಕಳ್ಳ ಮುಗುಳ್ನಗೆ ನಗತೊಡಗಿದ. "ಇದು ಮೋಜಿನ ಸಂಗತಿ. ನಾನು ಬೇರೊಬ್ಬರ ಮನೆಯ ವಸ್ತುಗಳನ್ನು ತೆಗೆದುಕೊಳ್ಳುತ್ತೇನೆಂದು ನನ್ನನ್ನು ಕಳ್ಳ ಎಂದೆನ್ನುತ್ತಾರೆ. ಆದರೆ ನೀನು ನಿನ್ನ ಮನೆಯ ವಸ್ತುಗಳನ್ನು ತೆಗೆದುಕೊಂಡರೆ ನಿನಗೆ ಕೂಡ ಕಳ್ಳ ಎನ್ನುತ್ತಾರಲ್ಲ." ಅನಾರ್ಕೊಗೆ ಸ್ವಲ್ಪ ಸಿಟ್ಟು ಬಂತು. "ನಾನು ಇಷ್ಟು ನೊಂದುಕೊಂಡಾಗ ನಿನಗೆ ಹೇಗೆ ನಗು ಬರುತ್ತದೆ?" ಅವಳ ಈ ನೊಂದ ದನಿ ಕೇಳಿ ಕಳ್ಳ ನಗುವದನ್ನು ನಿಲ್ಲಿಸಿದನು. ಅನಾರ್ಕೊ ಹೇಳತೊಡಗಿದಳು, "ಬರಿ ಹೆಸರಿಗಾಗಿ ಇದು ನನ್ನ ಮನೆ. ನನ್ನ ಬಟ್ಟೆಗಳು ಕೂಡ ನನ್ನವಲ್ಲ. ಅವು ನನ್ನದಾಗಿದ್ದರೂ ತಾಯಿಯೇ ಯಾವ ಫ್ರಾಕನ್ನು ಎಂದು ಹಾಕಿಕೊಳ್ಳುವದನ್ನು ನಿರ್ಧರಿಸುವಳು. ಕೊಳೆಯಾದ ಬಟ್ಟೆಗಳನ್ನು ಎಂದು ಒಗೆಯಬೇಕು, ಹಳೆ ಬಟ್ಟೆಗಳನ್ನು ಯಾರಿಗೆ ಕೊಡಬೇಕು, ಇವೆಲ್ಲವನ್ನು ಅವಳೇ ನಿರ್ಧರಿಸುವಳು. ಇಷ್ಟೇ ಅಲ್ಲ, ಈ ಕೋಣೆ ನನ್ನದಿದ್ದರೂ ಯಾವ ವಸ್ತುಗಳನ್ನು ಎಲ್ಲಿ ಇಡಬೇಕು ಅದು ಕೂಡ ಅವಳ ಅಪ್ಪಣೆ ಮೇರೆಗೆ. ನಾನು ಒಂದಿಷ್ಟು ಅವಳನ್ನು ಕೇಳದೆ ತಿಂದರೆ ನಾನು ಕಳ್ಳಿ. ಇದು ಸರಿಯೇ, ಕಳ್ಳ ಅಂಕಲ್. ನಿಜವಾಗಿ ನನ್ನದು ಎಂಬುದು ಏನೂ ಇಲ್ಲ."

ಕಳ್ಳ ಅಂಕಲ್ ಮುಗುಳ್ನಗುತ್ತ, "ನನ್ನ ಹತ್ತಿರ ಕೂಡ ನನ್ನದು ಎಂಬುದು ಏನೂ ಇಲ್ಲ. ಆದ್ದರಿಂದಲೇ ನಾನು ಕಳುವು ಮಾಡುತ್ತೇನೆ. ನೋಡಿಲ್ಲಿ, ದೇವರು ಮನುಷ್ಯ ಉಸಿರಾಡಲೆಂದು ಹವೆ ಕೊಟ್ಟಿದ್ದಾನೆ, ನೀರು ಕುಡಿಯಲೆಂದು ಮಳೆ ಬೀಳಿಸುತ್ತಾನೆ, ಹೀಗಿದ್ದರೂ ಮನುಷ್ಯರೆಲ್ಲರಿಗೂ ತಿನ್ನಲೆಂದು ಆಹಾರ ಏಕೆ ಕೊಡುತ್ತಿಲ್ಲ?"ಅನಾರ್ಕೊಗೆ ಕಳ್ಳ ಅಂಕಲ್ ನ ಮಾತುಗಳು ಸರಿ ಎನ್ನಿಸಿದವು. ದೇವರು ಎಲ್ಲ ಪ್ರಾಣಿ ಪಕ್ಷಿಗಳಿಗೆ, ನೀರಲ್ಲಿಯ ಮೀನುಗಳಿಗೆ, ಇಷ್ಟೇ ಅಲ್ಲ, ನೆಲದ ಕೆಳಗೆ ವಾಸಿಸುವ ಹುಳಗಳಿಗೆ ಕೂಡ ಆಹಾರ ನೀಡುವ ವ್ಯವಸ್ಥೆ ಮಾಡಿದ್ದಾನೆ. ಮನುಷ್ಯರಿಗಾಗಿ ಏನು ಇಲ್ಲ. ಇದು ಅನ್ಯಾಯ.

ಅಷ್ಟರಲ್ಲಿ ಕಳ್ಳ ಅಂಕಲ್ ಮುಂದುವರಿಸಿದ, "ನೀನೆ ಹೇಳು, ನನ್ನ ಆಹಾರ ಯಾರ ಪಾಲಾಯಿತು? ಜನರು ನನಗೆ ದುಡಿದು ಹೋಯಿತೆಲ್ಲಿ? ನನಗೆ ಹಸಿವೆಯಾದರೆ ಬರಿ ಉಪ್ಪಿನಕಾಯಿ ತಿನ್ನಲು ಎಲ್ಲಿಗೆ ಹೋಗಲಿ?" ಅನಾರ್ಕೊಗೆ ಇವೆಲ್ಲ ನನ್ನ ಪ್ರಶ್ನೆಗಳೇ ಎಂದು ಆಶ್ಚರ್ಯವೆನ್ನಿಸಿತು. ಏನೋ ಹೇಳಲು ಅವಳು ಬಾಯಿ ತೆರೆದಾಗ ಕಳ್ಳ ಅಂಕಲ್ ಮುಂದು ವರೆಸಿದ, "ನಿಜ ಹೇಳಬೇಕಿದ್ದರೆ ಯಾರೋ ನನ್ನ ಊಟವನ್ನು ಕಬಳಿಸಿದ್ದಾರೆ. ದೇವರು ನನ್ನ ಆಹಾರವನ್ನು ನನಗೆ ಕಳಿಸಿರಬೇಕು. ಆದರೆ ಕೆಲ ದುಷ್ಟರು ಆ ಊಟ ನನಗೆ ಮುಟ್ಟುವ ಮೊದಲೇನೆ ತಗೊಂಡು ಬಿಟ್ಟಿದ್ದಾರೆ." ನಿಮ್ಮ ಪಾಲಿನ ಊಟವನ್ನು ಯಾರು ತೆಗೆದುಕೊಡಿರಬಹುದು ಅಂಕಲ್ ?" ಅನಾರ್ಕೊನ ಮುಗ್ಧ ಪ್ರಶ್ನೆ. ನನಗೆ ಹೇಗೆ ಗೊತ್ತು? ಯಾರ ಬೆನ್ನ ಹತ್ತಲಿ? ಯಾರ ಹೆಸರನ್ನು ಹೇಳಲಿ? ಇಷ್ಟು ಮಾತ್ರ ನಿಜ, ಯಾರೋ ತಮ್ಮ ಪಾಲಿಗಿಂತ ಹೆಚ್ಚು ಆಹಾರವನ್ನು ಇಟ್ಟುಕೊಂಡಿದ್ದಾರೆ. ಅದಕ್ಕಾಗಿಯೇ ನಾನು ಅವರಲ್ಲಿ ಹೋಗಿ ಕಳುವು ಮಾಡುತ್ತೇನೆ." "ಕಳ್ಳ ಅಂಕಲ್, ನಿಮಗೆ ಪೋಲೀಸರ ಭಯವೆನ್ನಿಸುವದಿಲ್ಲವೇ?" ಅನಾರ್ಕೊ ಕೇಳಿದಳು. "ಸಾಕಷ್ಟು ಅನ್ನಿಸುತ್ತದೆ. ಅವರ ಕೈಯಲ್ಲಿ ಸಿಕ್ಕುಬಿದ್ದರೆ ಮೈಮುರಿಯುವಷ್ಟು ಥಳಿಸುವರು. ಆದರೆ ಈ ಕಳ್ಳ ಉದ್ಯೋಗದಲ್ಲಿಯ ಒಂದಿಷ್ಟು ಪಾಲು ಅವರಿಗೂ ಕೊಟ್ಟರೆ ಸಾಕು, ಸುಮ್ಮನಿರುವರು." ಕಳ್ಳ ಅಂಕಲ್ ಹೇಳಿದ. ಅಷ್ಟರಲ್ಲಿ ದೂರದಲ್ಲಿಯ ಕಾರಖಾನೆಯ ಐದು ಗಂಟೆಯ ಸಾಯರನ್ ಕಿರುಚಿತು. ಕಳ್ಳ್ ಅಂಕಲ್, "ಓಹ್, ನನಗೀಗ ಹೋಗಬೇಕು. ಇಂದು ಸಂಜೆ ಟಿವ್ಹಿಯ ಮೇಲೆ ಒಂದು ಒಳ್ಳೆಯ ಸಿನೇಮಾ ತೋರಿಸುತ್ತಿದ್ದಾರಂತೆ. ಕಳವಿಗೆ ಇದೇ ಸಮಯ ಒಳ್ಳೆಯದು. ಎಲ್ಲರೂ ಸಿನೇಮಾ ನೋಡಲು ಮಗ್ನರಾಗಿರುತ್ತಾರೆ. ನಾನು ಅಡಿಗೆ ಮನೆಯಲ್ಲಿಯ ಪಾತ್ರೆಗಳನ್ನು ಯಾರಿಗೂ ಗೊತ್ತಾಗದಂತೆ ಒಯ್ಯಬಹುದು." ಹೇಳುತ್ತಿದ್ದ. ಆತ ಕೈ ಮುಂದೆ ಮಾಡಿ ಚಪ್ಪಾಳೆ ಕೊಟ್ಟು ಅವಳ ತಲೆ ಸವರಿ ಹೊರಗೆ ಓಡಿದ.

ಈಗ ಅರ್ಕಾನೊ ಕೂದಲಿಗೂ ಸಾಸಿವೆ ಎಣ್ಣೆಯ ವಾಸನೆ. ಆದರೆ ಅವಳ ದುಃಖವೆಲ್ಲ ಮಾಯವಾಗಿತ್ತು. ಹೊರಬಿದ್ದಾಗ ಗುಗ್ಲಿ ಮತ್ತು ಡಾರ್ಕಿಯ ನಡುವೆ ಮೈತ್ರಿಯಾಗಿತ್ತು. ಅವರು ಪ್ರೀತಿಯಿಂದ ಧೂಳಿಯಲ್ಲಿ ಜಗಳವಾಡಿದಂತೆ ಹೊರಳಾಡುತ್ತಿದ್ದರು. ಅನಾರ್ಕೊ ಸಿಳ್ಳು ಹಾಕಿ ಕರೆದಳು. ಮೂವರು ಆಟದ ಬಯಲಿನಲ್ಲಿಂದ ನಡೆಯತೊಡಗಿದರು. ಅನಾರ್ಕೊನ ಒಂದು ಆಚೆಗೆ ಡಾರ್ಕಿ ಮತ್ತು ಇನ್ನೊಂದು ಆಚೆಗೆ ಗೂಡ್ಲಿ. ಇವರ ಮೇರವಣಿಗೆ ಬಯಲಿನಲ್ಲಿಂದ ಹೋದಾಗ ಬಯಲಿನ ತುದಿಯಲ್ಲಿ ಇವಳ ಸಂಗಡಿಗರ ರಾಮ - ರಾವಣರ ಕಾಳಗ ನಡೆದಿತ್ತು. ಟಿವ್ಹಿಯ ಮೇಲೆ ರಾಮಾಯಣ ತೋರಿಸಿದಂದಿನಿಂದ ಮಕ್ಕಳೆಲ್ಲ ಈ ಆಟವನ್ನೇ ಆಡುತ್ತಿದ್ದರು. ಪ್ಲಾಸ್ಟಿಕ್ ಧನುಷ್ಯ-ಬಾಣಗಳನ್ನು ಕೊಂಡು ತಂದು ಎರಡು ಬಣಗಳನ್ನು ಮಾಡಿ ಈ ಯುದ್ಧದ ಆಟ ನಡೆಯುತ್ತಿತ್ತು. ಅನಾರ್ಕೊಗೆ ಈ ಆಟ ಎಂದೂ ಸೇರಲಿಲ್ಲ. ರಾಮನ ಪಾರ್ಟಿಯವರೇ ಯಾವಾಗಲೂ ಗೆಲ್ಲಬೇಕಂತೆ. ಕೊನೆ ಸಲ ಈ ಆಟವಾಡುತ್ತಿದ್ದಾಗ ಅವಳು ರಾವಣನ ಪಾರ್ಟಿಯಲ್ಲಿದ್ದಳು. ರಾಮನ ಪಾರ್ಟಿಯಲ್ಲಿದ್ದವರನ್ನು   ಚೆನ್ನಾಗಿ ಥಳಿಸಿದ್ದಳು. ಎಲ್ಲರು ಕೂಡಿ ಅರ್ಧದಲ್ಲಿಯೇ ಆಟವನ್ನು ನಿಲ್ಲಿಸಿಬಿಟ್ಟರು. ಗೋಲುನಿಗೆ ಸಾಕಷ್ಟು ಪೆಟ್ಟು ಬಿದ್ದಿತ್ತು. "ರಾಮನ ಪಾರ್ಟಿಯವರನ್ನು ಹೀಗೆ ಹೊಡೆಯವದು ಪಾಪ" ಎಂದು ಅಳುತ್ತಲೇ ಹೇಳುತ್ತಿದ್ದನು. ಅನಾರ್ಕೊ ತಕ್ಷಣ ಅಲ್ಲಿಂದ ಹೊರಟು ಹೋದಳು. ಅವಳಿಗೆ ಪಾಪದ ಭಯವಿರಲಿಲ್ಲ, ಆದರೆ ಮೂರ್ಖತನ ಎಂದರೆ ಸಿಟ್ಟು. ಕಿಂಕುನ ಮೂಗಿಗೆ ಬಾಣ ಬಡೆದಿತ್ತು. ಕಣ್ಣಿಗೆ ಬಡೆದಿದ್ದರೆ... ಕಿಂಕು ಕೂಡ ಆಟದಿಂದ ಹೊರಬಿದ್ದ. ಅವಳಿಗೆ ಈಗ ಕಿಂಕುನ ಜೊತೆ ಮಾತಾಡಿ ಕಳ್ಳನ ಸುದ್ದಿ ಹೇಳುವ ತವಕವಿತ್ತು. ಇಂದು ಅವಳು ನಿಜವಾದ ಕಳ್ಳನನ್ನು ನೋಡಿದ್ದಳು; ಮಾತಾಡಿದ್ದಳು; ಮತ್ತು ಕೈ ಕುಲುಕಿದ್ದಳು. ಇಷ್ಟೆಲ್ಲ ಆದಮೇಲೆ ಇದನ್ನೆಲ್ಲ ಯಾರಿಗೂ ಹೇಳದೇ

ಸುಮ್ಮನಿರುವದು ಅಶಕ್ಯ. ಈ ಹೊಟ್ಟೆತುಂಬ ಇರುವ ಮಾತುಗಳನ್ನು ಆಡಲೆಂದು ಅವಳು ಕಿಂಕುನನ್ನು ಹುಡುಕಾಡುತ್ತಿದ್ದಳು. ಡಾರ್ಕಿಗೆ ಕಿಂಕು ಕಾಣಿಸಿದ. ಕಿಂಕು ಬಯಲಿನ ಮೂಲೆಯಲ್ಲಿದ್ದ ತಗ್ಗಿನಲ್ಲಿ ಅಡಗಿಕೊಂಡು ಪೋಲೀಸರ ತೋಟದಲ್ಲಿಂದ ಕಳವು ಮಾಡಿದ ಪೇರಲ ಹಣ್ಣನ್ನು ತಿನ್ನುತ್ತಿದ್ದ. ಡಾರ್ಕಿ ಹತ್ತಿರ ಹೋಗಿ ಬಾಲಾಡಿಸುತ್ತ ಅವನ ಮುಖವನ್ನು ನೆಕ್ಕತೊಡಗಿತು. ಆ ಮೇಲೆ ಅನಾರ್ಕೊ ತೆಗ್ಗಿನಲ್ಲಿ ಕೆಳಗಿಳಿದು ಎಲ್ಲ ಕತೆಯನ್ನು -ಉಪ್ಪಿನಕಾಯಿಯ ಪ್ರಸಂಗದಿಂದ ಮೊದಲುಮಾಡಿ ಕಳ್ಳ ಹೋಗುವವರೆಗಿನತನಕ- ಬಣ್ಣಿಸಿ ಹೇಳಿದಳು.

ಈ ಸಾಹಸದ ಕತೆ ಹೇಳುವದರಲ್ಲಿ ಇಬ್ಬರೂ ಮೈಮರೆತಾಗ ಕತ್ತಲಾದದ್ದೇ ಅವರಿಗೆ ತಿಳಿಯಲಿಲ್ಲ. ದಾರಿದೀಪಗಳೆಲ್ಲ ಝಗಝಗಿಸುತ್ತಿದ್ದವು. ಉಳಿದೆಲ್ಲ ಮಕ್ಕಳು ಮನೆ ಸೇರಿದ್ದರು. ಡಾರ್ಕಿ ಮತ್ತು ಗೂಡ್ಲಿ ತಗ್ಗಿನಿಂದ ಹೊರಬೀಳಲು ಹವಣಿಸುತ್ತಿದ್ದವು ಆದರೆ ಕೊನೆಗೆ ಹೊರಬಿದ್ದು ಅನಾರ್ಕೊ ಮತ್ತು ಕಿಂಕುವಿನ ಮಗ್ಗುಲಲ್ಲಿ ಕುಳಿತವು. ಅವು ಕೂಡ ಅನಾರ್ಕೊನ ಕತೆ ಆಲಿಸುತ್ತಿರಬಹುದು. ಅವಳು ಕತೆ ಹೇಳುವಾಗ ಕಿಂಕು ನಡುನಡುವೆ ಪ್ರಶ್ನೆ ಕೇಳುತ್ತಿದ್ದಂತೆ ಬೇರೊಂಡು ವಿಷಯದ ಬಗ್ಗೆ ಮಾತಾಡುತ್ತಿದ್ದರು. ಇನ್ನೂ ಅವಳ ಕತೆ ಮುಗಿದಿರಲಿಲ್ಲ. ಅಷ್ಟರಲ್ಲಿ ಸಾಕಷ್ಟು ಗದ್ದಲದ ದನಿ ಕೇಳಿಸತೊಡಗಿತು. ಜನರು ಬಯಲಿನ ಬದಿಯಲ್ಲಿಯ ಹೆದ್ದಾರಿಯನ್ನು ಓಡೋಡುತ್ತ ದಾಟುತ್ತಲಿದ್ದರು. “ಆ ಕಳ್ಳನನ್ನು ಹಿಡಿಯಿರಿ, ಹೊಡೆಯಿರಿ.” ಎಂದು ಕೂಗುತ್ತಿದ್ದರು. ಅನಾರ್ಕೊನ ಎದೆ ರಭಸದಿಂದ ಬಡೆಯತೊಡಗಿತು. ಡಾರ್ಕಿಗೆ ಬೊಗಳಬೇಡವೆಂದು ಅದರ ಕಿವಿಯಲ್ಲಿ ಮೆಲುದನಿಯಲ್ಲಿ ಹೇಳಿದಳು. ಡಾರ್ಕಿ ತೆಪ್ಪಗೆ ಕುಳಿತಿತು. ಮತ್ತೇ ಓಡುತ್ತಿರುವ ಕಾಲುಗಳ ಸಪ್ಪಳವನ್ನು ಅವರು ಕೇಳಿದರು. ಬೆಳದಿಂಗಳ ಬೆಳಕಿನಲ್ಲಿ ಅನಾರ್ಕೊಳಿಗೆ ಕಳ್ಳ ಅಂಕಲ್ ಆ ತಗ್ಗಿನ ಕಡೆ ಓಡುತ್ತ ಬರುತ್ತಿರುವದು ಕಂಡಿತು.

“ಕಳ್ಳ ಅಂಕಲ್, ಅಂಕಲ್, ಇಲ್ಲಿ ಬಾ. ನಾನಿದ್ದೇನೆ.” ಎಂದು ಅವನಿಗೆ ಕೇಳಿಸುವಂತೆ ಪಿಸುಮಾತಿನಲ್ಲಿ ಹೇಳಿದಳು. ಕಳ್ಳ ಅಂಕಲ್ ಸಮೀಪಕ್ಕೆ ಬಂದನು. ಅವನ ಕೈಯಲ್ಲಿ ಹೊಳೆಯುತ್ತಿರುವ ಹಿತ್ತಾಳೆ ತಾಟು ಇತ್ತು. ಅವನು ಜೋರಾಗಿ ಉಸಿರಾಡಿಸುತ್ತಿದ್ದ. “ಕಳ್ಳ ಅಂಕಲ್, ಈತ ನನ್ನ ಗೆಳೆಯ, ಕಿಂಕು. ಚಿಂತೆ ಮಾಡಬೇಡ, ಈ ತಗ್ಗಿನಲ್ಲಿ ಮರೆಮಾಚಿಕೊಂಡರೆ ಯಾರಿಗೂ ಕಾಣಲಿಕ್ಕಿಲ್ಲ.” ಕಳ್ಳ ಅಂಕಲ್ ತಗ್ಗಿನಲ್ಲಿಳಿದು ಕಾಣದಂತಾದ. ಕಣ್ಣಿನ ತುದಿಯಿಂದ ನೋಡಿದಾಗ ಅನಾರ್ಕೊಗೆ ಕೆಲವರು ಅವಳೆಡೆ ಬರುತ್ತಿರುವದು ಕಂಡಿತು. ಅನಾರ್ಕೊ ಮತ್ತು ಕಿಂಕು ಇವರನ್ನು ಅಲ್ಲಿ ಕಂಡು ಅವರಿಗೆ ಅಚ್ಚರಿಯಾಯಿತು. ಸಿಹಿ ತಿಂಡಿ ಮಾರಾಟ ಮಾಡುವ ಸರದಾರ ಬನ್ಸಿ ಅಂಕಲ್ ಜಬರಿಸುತ್ತ.”ಏ ಹುಡುಗಿ, ಇಲ್ಲಿ ಏನು ಮಾಡುತ್ತಿರುವಿ? ಇಲ್ಲಿಂದ ಒಬ್ಬ ಕಳ್ಳ ಓಡುತ್ತ ಹೋಗಿದ್ದಾನೆ. ಗೊತ್ತಾ?” ಎಂದು ಕಿರುಚಿದ. “ಅಂಕಲ್, ನಾವಿಬ್ಬರು ಟ್ಯೂಶನ್ ಮುಗಿಸಿ ಮನೆಗೆ ಹೋಗುತ್ತಲಿದ್ದೇವೆ. ನಿಮ್ಮ ಹೊರತು ಇಲ್ಲಿ ಮತ್ತೇ ಯಾರೂ ಬಂದಿಲ್ಲವಲ್ಲ”. ಸರದಾರ ಅಂಕಲ್ ದೂರದಿಂದಲೇ, “ಆತ ಇಲ್ಲಿಂದ ಹೋಗಿರಲಿಕ್ಕಿಲ್ಲ. ಅಲ್ಲಿ ಕೆರೆಯಾಚೆ ಹೋಗಿರಬಹುದು. ನಡೆಯಿರಿ, ಅಲ್ಲಿಗೆ ಹೋಗುವ” ಎಂದೆನ್ನುತ್ತ ಎಲ್ಲರನ್ನು ಕರೆದುಕೊಂಡು ಹೋದ. ಅವರ ಕಾಲ್ಹೆಜ್ಜೆಗಳ ಸಪ್ಪಳ ಕೇಳದಾಯಿತು. ಅನಾರ್ಕೊ ಮತ್ತು ಕಿಂಕು ನಿಟ್ಟುಸಿರು ಬಿಟ್ಟರು.

ಕಳ್ಳ ಅಂಕಲ್ ತಗ್ಗಿನಿಂದ ಜಿಗಿದು ಹೊರಬಂದ. “ಓಹ! ನೀವಿಲ್ಲದಿದ್ದರೆ ಸಿಕ್ಕಿ ಬೀಳುತ್ತಿದ್ದೆ. ಟಿವ್ಹಿ ಕೇಂದ್ರದಲ್ಲಿ ಕೆಲಸ ಮಾಡುವವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇಂದು ಸಿನೇಮಾದ ಬದಲಾಗಿ ಪ್ರಧಾನಿಯವರ ರಾಷ್ಟ್ರಕ್ಕೆ ಉದ್ದೇಶಿಸಿದ

ಭಾಷಣ ಬಿತ್ತರಿಸಿದ್ದರಿಂದ ಎಲ್ಲರು ಟಿವ್ಹಿ ಸ್ವಿಚ್ ಆಫ್ ಮಾಡಿ ಹೊರಗೆ ತಿರುಗಾಡುತ್ತಿದ್ದರು. ನಾನು ಅಡಿಗೆ ಮನೆಗೆ ಹೋಗುವ ಮೊದಲೇನೆ ಎಲ್ಲರೂ ಕೂಗತೊಡಗಿದರು. ಆದರೂ ಈ ತಾಟು ಸಿಕ್ಕತು.'' ಕಳ್ಳ ಒಂದೇ ಉಸಿರಿನಲ್ಲಿ ಹೇಳಿದ. ತಾಟನ್ನು ಕೆಳಗಿಟ್ಟ. ಮತ್ತು ಕಿಸೆಯಿಂದ ಉಪ್ಪಿವಕಾಯಿಯ ಚಿಕ್ಕ ಬಾಟಲಿಯನ್ನು ಹೊರತೆಗೆದ. ''ಹೊರ ಬೀಳುವಾಗ ಇದನ್ನು ಕೂಡ ಕಳುವು ಮಾಡಿದೆ. ನಾವೆಲ್ಲರು ತಿನ್ನುವ.'' ಕಳ್ಳ, ಅನಾರ್ಕೊ ಮತ್ತು ಕಿಂಕು ಉಪ್ಪಿನಕಾಯಿಯ ಹೋಳುಗಳನ್ನು ತಿನ್ನುತ್ತ ಬೆರಳನ್ನು ನೆಕ್ಕತೊಡಗಿದರು.

ಅಂಕಲ್ ಅನಾರ್ಕೊ ಮತ್ತು ಕಿಂಕು ಇಬ್ಬರನ್ನು ಒಂದೊಂದು ಕೈಯಿಂದ ಹಿಡಿದ. ಅನಾರ್ಕೊನ ಹೆಗಲ ಮೇಲೆ ಗೂಡ್ಲಿ ಕುಳಿತುಕೊಂಡಿತು. ಕಿಂಕು ಡಾರ್ಕಿಯ ಹಿಂಗಾಲುಗಳನ್ನು ಎತ್ತಿ ಹಿಡಿದ. ತಾಟನ್ನು ನೆಲದ ಮೆಲಿಟ್ಟು ಅದಕ್ಕೆ ಸುತ್ತು ಹಾಕುತ್ತ ಎಲ್ಲರು ಕುಣಿಯತೊಡಗಿದರು. ತಾಟಿನ ಮೇಲೆ ಚಂದ್ರನ ಪ್ರತಿಬಿಂಬ ಕಾಣುತ್ತಿತ್ತು. ಕಳ್ಳ ಅಂಕಲ್ ಹುಣ್ಣಿವೆ ರಾತ್ರಿಯಲ್ಲಿ ಭರ್ಜರಿ ಪಾರ್ಟಿ ಮಾಡಿದ.